**ಓ ಎಸ್ ನಂಃ 162/2021**
**ಪಿ ಡಬ್ಲ್ಯೂ ಃ 2**

**ದಿಃ 27.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ರ ಪ್ರತಿವಾದಿ ಪರ ಶ್ರೀ. ಆರ್ ಎಸ್ ವಕೀಲರಿಂದಃ-**

ನನಗೆ ಈ ದಾವೆಯಲ್ಲಿ 1 ನೇ ಪ್ರತಿವಾದಿ ಮಾತ್ರ ಗೊತ್ತು. ವಾದಿ ಈ ದಾವೆಯನ್ನು ಎಷ್ಟು ಪ್ರತಿವಾದಿಗಳ ವಿರುದ್ದ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಖಾನೇಷುಮಾರಿ ನಂಬರ್ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಚಕ್ಕುಬಂದಿ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ವಾದಿಯು ಏಳಿಗೆಹಳ್ಳಿ ಗ್ರಾಮದವರು ಎಂದು ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿದ್ದೀರಿ ಸದರಿ ವಿಚಾರದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ವಾದಿಯು ಅದೇ ಊರಿನವರು ಆದರೆ ನಾನು ಯಾವುದೆ ದಾಖಲಾತಿಯನ್ನು ಹಾಜರುಪಡಿಸಿಲ್ಲ. ವಾದಿಯು ಮನೆಯನ್ನು ಕಟ್ಟಿಸುವ ಸಂದರ್ಭದಲ್ಲಿ 1 ನೇ ಪ್ರತಿವಾದಿಯಿಂದ ಸಾಲವನ್ನು ಪಡೆದಿದ್ದಾರೆ ಎಂದು ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿದ್ದೀರಿ ಯಾವಾಗ ಮತ್ತು ಎಷ್ಟು ಸಾಲವನ್ನು ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು 1 ನೇ ಪ್ರತಿವಾದಿ ನಡುವೆ ಕ್ರಯ ಪತ್ರ ಆಗಿದೆ ಎಂದು ತಾವು ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿದ್ದೀರಿ ಸದರಿ ಕ್ರಯ ಪತ್ರಕ್ಕೆ ತಾವೇನಾದರೂ ಸಾಕ್ಷಿದಾರರಾಗಿ ಸಹಿ ಮಾಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಿಃ 08.05.2017 ರಂದು ರೂ. 2,90,000/- ಗೆ ದಾವಾ ಸ್ವತ್ತಿನ 2 ನೆ ಮಹಡಿಯಲ್ಲಿ ಕಟ್ಟಿರುವ ಮನೆಯನ್ನು ಭೋಗ್ಯಕ್ಕೆ ಮಾಡಿಕೊಂಡಿರುತ್ತೇನೆ ಸದರಿ ಭೋಗ್ಯ ಪತ್ರವು ನೋಂದಣಿ ಆಗಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಭೋಗ್ಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ತಾವು ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ 1 ನೆ ಪ್ರತಿವಾದಿಯು ದಾವಾ ಸ್ವತ್ತು ಕ್ರಯವಾಗಿದೆ ಎಂದು ಹೇಳಿ ತಾವು ವಾಸ ಮಾಡುತ್ತಿದ್ದ ಮನೆಗೆ ತಮ್ಮ ಮನೆಯಲ್ಲಿದ್ದ ಪಾತ್ರೆ ಮತ್ತು ಇನ್ನಿತರ ವಸ್ತುಗಳನ್ನು ಸೇರಿಸಿ ಮನೆಗೆ ಬೀಗ ಹಾಕಿ ತಮ್ಮನ್ನು ಮನೆಯಿಂದ ಹೊರ ಹಾಕಿದ್ದೀರಿ ಎಂದು ಹೇಳಿ ಬರೆಸಿದ್ದೀರಿ ಸದರಿ ವಿಚಾರದ ಬಗ್ಗೆ ತಾವೇನಾದರೂ 1 ನೇ ಪ್ರತಿವಾದಿ ವಿರುದ್ದ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡಿದ್ದೀರ ಎಂದರೆ ಸಾಕ್ಷಿ ದೂರನ್ನು ದಾಖಲು ಮಾಡಿದ್ದೇನೆ ಎಂದು ನುಡಿಯುತ್ತಾರೆ. ತಾವು ವಾದಿಗೆ ಸೇರಿದ ಮನೆಯನ್ನು ಭೋಗ್ಯಕ್ಕೆ ಇರುವುದಿಲ್ಲ 1 ನೇ ತಮ್ಮನ್ನು ಮನೆಯಿಂದ ಹೊರ ಹಾಕಿರುವುದಿಲ್ಲ ಆದರ ಕಾರಣ ತಾವು 1 ನೇ ಪ್ರತಿವಾದಿ

ವಿರುದ್ದ ದೂರನ್ನು ದಾಖಲು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ತಮಗೆ ರೂ. 2,90,000/- ಹಣವನ್ನು ಕೊಟ್ಟಿರುವುದಿಲ್ಲ ಎಂದು ಹೇಳಿ ಬರೆಸಿದ್ದೀರಿ ಸದರಿ ವಿಚಾರದ ಬಗ್ಗೆ ತಾವು ಕಾನೂನಿನ ಕ್ರಮ ತೆಗೆದುಕೊಂಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ತಮಗೆ ಈ ದಾವೆಯ ಗೊತ್ತಿಲ್ಲದಿದ್ದರೂ ಸಹ ತಾವು ವಾದಿಯ ಮಾತನ್ನು ಕೇಳಿ ಆಕೆಗೆ ಸಹಾಯ ಮಾಡುವ ಉದ್ದೇಶದಿಂದ ತಾವು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಪ್ರಮಾಣವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**